ರಾಜಸ್ಥಾನದ ಕೋಟ ಎಂಬ ನಗರ 'ಕೋಚಿಂಗ್ ಸೆಂಟರ್‌ಗಳ ಫ್ಯಾಕ್ಟರಿ' ಎಂದೇ ಪ್ರಸಿದ್ಧ. ನೀಟ್, ಜೆಇಇ ಹಾಗೂ ಐಐಟಿ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ಕೋಚಿಂಗ್ ಸೆಂಟರ್‌ಗಳು ಹಾಗೂ ಆ ಕೇಂದ್ರಗಳಲ್ಲಿ ತರಬೇತಿ ಪಡೆಯಲು ದೇಶದ ವಿವಿಧ ಭಾಗಗಳಿಂದ ಆಗಮಿಸಿರುವ ಸಾವಿರಾರು ವಿದ್ಯಾರ್ಥಿಗಳು ಕೋಟದಲ್ಲಿದ್ದಾರೆ. ಈ ಪರೀಕ್ಷಾ ಕೇಂದ್ರಗಳು ಹಾಗೂ ವಿದ್ಯಾರ್ಥಿಗಳ ಕಾರಣದಿಂದಲೇ ಕೋಟ್ಯಂತರ ರೂಪಾಯಿ ವಹಿವಾಟು ರೂಪುಗೊಂಡಿದೆ. ಸದ್ಯಕ್ಕೆ ಈ ಊರು ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಆಕಾಂಕ್ಷಿಗಳ 'ಮೆಕ್ಕಾ' ಎಂದೇ ಪ್ರಸಿದ್ಧ. ಆದರೆ, ಇತ್ತೀಚೆಗೆ ಈ ಊರು ವಿದ್ಯಾರ್ಥಿಗಳ ಆತ್ಮಹತ್ಯೆಯ ಕಾರಣದಿಂದಾಗಿ ಸುದ್ದಿಯಾಗುತ್ತಿದೆ. ಪ್ರವೇಶ ಪರೀಕ್ಷಾ ಆಕಾಂಕ್ಷಿಗಳು ಮಾನಸಿಕ ಒತ್ತಡದ ಕಾರಣದಿಂದಾಗಿ ಆತ್ಮಹತ್ಯೆ ಮಾಡಿಕೊಳ್ಳುವ ವಿದ್ಯಮಾನಗಳು ಕೋಟ ನಗರಕ್ಕೆ ಕುಖ್ಯಾತಿಯನ್ನು ತಂದುಕೊಟ್ಟಿವೆ.

ಈ ಲೇಖನ ಸಿದ್ಧಪಡಿಸುವ ವೇಳೆಗೆ, 2023ರಲ್ಲಿ ಇಲ್ಲಿಯವರೆಗೆ 26 ವಿದ್ಯಾರ್ಥಿಗಳು ಕೋಟದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 2015ರಲ್ಲಿ 18, 2016ರಲ್ಲಿ 17, 2017ರಲ್ಲಿ 7, 2018ರಲ್ಲಿ 20, 2019ರಲ್ಲಿ 18 ಹಾಗೂ 2022ರಲ್ಲಿ 15 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸ್ ದಾಖಲೆಗಳು ಹೇಳುತ್ತಿವೆ. ಇದು ಒಂದು ಪಟ್ಟಣದ ಕಥೆಯಾಯಿತು. ದೇಶದ ಪ್ರತಿಷ್ಠಿತ ಶೈಕ್ಷಣಿಕ ಸಂಸ್ಥೆಗಳಾದ ಐಐಟಿಗಳಲ್ಲಿಯೂ ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳು ವರದಿಯಾಗುತ್ತಿವೆ. ವಿಶ್ವವಿದ್ಯಾಲಯಗಳಲ್ಲಿಯೂ ವಿದ್ಯಾರ್ಥಿಗಳ ಆತ್ಮಹತ್ಯೆ ಮತ್ತು ಖಿನ್ನತೆಯ ಪ್ರಕರಣಗಳು ವರದಿಯಾಗುತ್ತಿವೆ. ಈ ಎಲ್ಲ ವರದಿಗಳು ಮತ್ತು ಆತ್ಮಹತ್ಯೆ ಪ್ರಸಂಗಗಳು ಹೇಳುತ್ತಿರುವುದೇನು? ಅನೇಕ ಸಂಸ್ಥೆಗಳು ನಡೆಸಿದ ಅಧ್ಯಯನಗಳು ಹಾಗೂ ಶಿಕ್ಷಕರು ಮತ್ತು ಮನಃಶಾಸ್ತ್ರಜ್ಞರ ಅಭಿಪ್ರಾಯವನ್ನು ಒಂದೇ ಸಾಲಿನಲ್ಲಿ ಹೇಳುವುದಾದರೆ, 'ನಮ್ಮ ದೇಶದ ಹದಿಹರೆಯದವರು ಅತೀವ ಮಾನಸಿಕ ಒತ್ತಡದಲ್ಲಿದ್ದಾರೆ'.



